

## ಧೋನಿ ಸಾಧನೆಗಳು

- ಟೆಸ್ಟ್ ಕ್ರಿಕೆಟ್‌ನಲ್ಲಿ 90 ಪಂದ್ಯಗಳಿಂದ 4876 ರನ್ ಗಳಿಸಿದ್ದಾರೆ. ಅದರಲ್ಲಿ 6 ಶತಕ, 33 ಅರ್ಧಶತಕಗಳು ಇವೆ. 224 ಅವರ ವೈಯಕ್ತಿಕ ಶ್ರೇಷ್ಠ ಸ್ಕೋರ್‌!
- ಏಕದಿನ ಕ್ರಿಕೆಟ್‌ನಲ್ಲಿ 350 ಪಂದ್ಯಗಳಿಂದ 10773 ರನ್ ಪೇರಿಸಿದ್ದಾರೆ. ಅದರಲ್ಲಿ 10 ಶತಕ, 73 ಅರ್ಧಶತಕಗಳು ಇವೆ. ಅಜೇಯ 183 ಅವರ ಶ್ರೇಷ್ಠ ಸ್ಕೋರ್‌!
- ಟಿ20 ಕ್ರಿಕೆಟ್‌ನಲ್ಲಿ 98 ಪಂದ್ಯಗಳನ್ನು ಆಡಿರುವ ಅವರು 1617 ರನ್ ಗಳಿಸಿದ್ದಾರೆ. 2 ಅರ್ಧಶತಕಗಳು ಇವೆ.

ಧೋನಿಯ ಮನೆಯ ಮೇಲೆ ಕಲ್ಲು ತೂರಾಟ ನಡೆಸಿದ್ದರು. ಅದೇ ವರ್ಷ ದಕ್ಷಿಣ ಆಫ್ರಿಕಾದಲ್ಲಿ ಟಿ20 ವಿಶ್ವಕಪ್ ನಡೆದಾಗ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಗಂಗೂಲಿ, ಅನಿಲ್ ಕುಂಬ್ಳೆ ಅವರಂತಹ ಅನುಭವಿ ಆಟಗಾರರು ಇರಲಿಲ್ಲ. ರೋಹಿತ್ ಶರ್ಮಾ, ಇರ್ಫಾನ್ ಪಠಾಣ್, ಜೋಗಿಂದರ್ ಸಿಂಗ್, ಶ್ರೀಶಾಂತ್ ಅವರಂತಹ ಯುವ ಆಟಗಾರರ ದಂಡಿನ ನಾಯಕತ್ವವನ್ನು ಧೋನಿಗೆ ಪಟ್ಟ ಕಟ್ಟಲಾಯಿತು. ಆ ಸತ್ವ ಪರೀಕ್ಷೆಯಲ್ಲಿ ಮಹಿ ಗೆದ್ದರು. ಭಾರತ ವಿಶ್ವಕಪ್ ವಿಜಯಿಯಾಗಿತ್ತು.

2017ರಲ್ಲಿ ನಡೆಯುತ್ತಿದ್ದ ಏಕದಿನ ಸರಣಿಯ ನಡುವೆಯೇ ಏಕದಿನ ಮತ್ತು ಟಿ20 ಕ್ರಿಕೆಟ್ ತಂಡದ ನಾಯಕತ್ವವನ್ನು ವಿರಾಟ್ ಕೊಹ್ಲಿಗೆ ಹಸ್ತಾಂತರಿಸಿದ್ದರು. ಆದರೆ ಆಟಗಾರನಾಗಿ ಮತ್ತು ತಂಡದ ಆಟಗಾರರಿಗೆ ಮಾರ್ಗದರ್ಶಕರಾಗಿ ಆಡಿದ್ದರು. ಹೋದ ವರ್ಷ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಸೆಮಿಫೈನಲ್‌ನಲ್ಲಿ ಅವರು ರನ್‌ಔಟ್ ಆಗಿ ಮರಳಿದ್ದಾಗ, ಭಾರತಕ್ಕೆ ಫೈನಲ್‌ಗೆ ಸಾಗುವ ಅವಕಾಶ ಕೈತಪ್ಪಿತ್ತು. ಅಂದಹಾಗೆ ಈಗ ರಾಂಚಿಯಲ್ಲಿ ವಿಶ್ವದರ್ಜೆಯ ಕ್ರೀಡಾಂಗಣ ನಿರ್ಮಾಣವಾಗಿದೆ. ಧೋನಿಯ ವರ್ಚಸ್ಸಿನ ಫಲಶ್ರುತಿ ಅದು.

### ಐಪಿಎಲ್‌ನಲ್ಲಿಯೂ ದಿಗ್ಗಜ

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಧೋನಿ, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಟೂರ್ನಿಯಲ್ಲಿಯೂ 'ದಿಗ್ಗಜ'ರಾಗಿ ಬೆಳೆದರು. ಅವರ ನಾಯಕತ್ವದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐದು ಬಾರಿ ಚಾಂಪಿಯನ್ ಆಯಿತು.

ಅವರ ತಂಡದ ವಿಶೇಷವೆಂದರೆ; ಕ್ರಿಕೆಟ್ ನಿವೃತ್ತಿ ಅಂಚಿನಲ್ಲಿ ಇರುವವರು ಮತ್ತು ಅನ್‌ಕ್ಯಾಪ್ಡ್ ಆಟಗಾರರ ಹದವಾದ ಮಿಶ್ರಣ. ಅವರೆಲ್ಲರ ಸಾಮರ್ಥ್ಯವನ್ನು ಬಳಸಿಕೊಂಡು ತಂಡವನ್ನು ಗೆಲ್ಲಿಸುವ ಚಾಣಾಕ್ಷತೆ ಧೋನಿಯವರದ್ದು. ಹಾಗಾಗಿಯೇ ಅವರಿಗೆ 43 ವರ್ಷ ತುಂಬಿದರೂ ಚೆನ್ನೈ ಸೂಪರ್ ಕಿಂಗ್ಸ್ ಆಡಳಿತವು ಬಿಟ್ಟುಕೊಡುತ್ತಿಲ್ಲ. ಬೇರೆಯವರಿಗೆ ನಾಯಕತ್ವ ವಹಿಸಿರುವ ಧೋನಿಯ ಆಕರ್ಷಣೆ ಮಾತ್ರ ಕಮ್ಮಿಯಾಗಿಲ್ಲ.

ಕಳೆದ ಮೂರು ವರ್ಷಗಳಿಂದ ಅವರು ಕ್ರೀಸ್‌ಗೆ ಬಂದು ಕೇವಲ ನಾಲ್ಕೈದು ಎಸೆತ ಆಡುವುದನ್ನು ನೋಡಲೆಂದೇ ಕೋಟಿ ಕೋಟಿ ಅಭಿಮಾನಿಗಳು ಕಾದಿರುತ್ತಾರೆ. ಅವರು ಕ್ರೀಸ್‌ನಲ್ಲಿ ಇದ್ದಷ್ಟು ಹೊತ್ತು ಟಿ.ವಿ ಮತ್ತು ಆ್ಯಪ್‌ನಲ್ಲಿ ನೋಡುಗರ ಸಂಖ್ಯೆ ಗಗನಮುಖಿಯಾಗಿರುತ್ತದೆ.

ಇಡೀ ವರ್ಷ ತಮ್ಮ ತೋಟ, ಗದ್ದೆ ಮತ್ತು ಜಾಹೀರಾತು ಶೂಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತ ತಣ್ಣಗೆ ಇರುವ ಧೋನಿ ಐಪಿಎಲ್‌ನಲ್ಲಿ ಮಾತ್ರ ಕಣ್ಕಿಕ್ಕಳಿಯುತ್ತಾರೆ.

ಅವರ ವಿಕೆಟ್‌ಕೀಪಿಂಗ್‌ನಲ್ಲಿ ಇಂದಿಗೂ ಅದೇ ಚುರುಕು ಮತ್ತು ವೇಗ ಇದೆ. ಅವರಂತೆ ಸ್ಟಂಪಿಂಗ್ ಮಾಡುವ ಚುರುಕುತನವನ್ನು ರೂಢಿಸಿಕೊಳ್ಳಲು ಯುವ ವಿಕೆಟ್‌ಕೀಪರ್‌ಗಳು ಹರಸಾಹಸಪಡುತ್ತಿದ್ದಾರೆ. ಇತ್ತೀಚೆಗಷ್ಟೇ ಮುಗಿದ ಐಪಿಎಲ್‌ನಲ್ಲಿ 0.12 ಸೆಕೆಂಡುಗಳ ವೇಗದಲ್ಲಿ ಸ್ಟಂಪಿಂಗ್ ಮಾಡುವ ಮೂಲಕ ಗಮನ ಸೆಳೆದಿದ್ದರು. ಈ ವಿಷಯದಲ್ಲಿ ಅಷ್ಟೇ ಅಲ್ಲ. ಆಟ ಮತ್ತು ವ್ಯಕ್ತಿತ್ವ ಎರಡರಲ್ಲೂ ಅವರಿಗೆ ಅವರೇ ಸಾಟಿ. ■


